ನಿಲುವೇನು ಹಾಗೂ ಒಂದು ವೇಳೆ ಈ ನಾಡಕಚೇರಿಗಳನ್ನು ಮುಂದುವರೆಸುವ ಉದ್ದೇಶವಿದ್ದ ಪಕ್ಷದಲ್ಲಿ ರೈತರುಗಳಿಂದ, ಜಮೀನು ಮಾಲೀಕರುಗಳಿಂದ ಖಾತೆ–ಪಹಣಿ ಇತ್ಯಾದಿಗಳನ್ನು ಬರೆಯಲು ಅಪಾರವಾದ ಹಣದ ಸುಲಿಗೆಯನ್ನು ಮಾಡಿ ಮೆರೆಯುತ್ತಿರುವ ಗ್ರಾಮ ಲೆಕ್ಕಿಗರು ಮತ್ತು ಉಪ ತಹಶೀಲ್ದಾರ್‌ಗಳ ಮೇಲೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರವು ಸ್ಪಷ್ಟ ವಿವರಣೆ ನೀಡಬೇಕೆಂದು ಕೋರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನಾನು ಶ್ರೀ ಚವಾಣ್ ಅವರ ಒಂದು ಪ್ರಶ್ನೆಗೆ ಉತ್ತರ ಹೇಳುತ್ತಾ ಸ್ಪಷ್ಟಪಡಿಸಿದ್ದೇನೆ. ಈಗ ಪುನಃ ಹೇಳುತ್ತೇನೆ. ಡೆಪ್ಯುಟಿ ತಹಶೀಲ್ದಾರ್ ಅವರಿಂದ ನಾಡಕಚೇರಿಯಲ್ಲಿ ಏನು ಕರೆಪ್ಶನ್ ಇದೆಯೆಂದು ಏನು ಆಪಾದನೆ ಮಾಡಿದ್ದಾರೆ; ಈ ಬಗ್ಗೆ ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್ ಅವರಿಂದ ಎನ್‌ಕ್ವೈರಿ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

(6) ಹೊಸನಗರ ತಾಲ್ಲೂಕಿನ ಸುಳಗೋಡು ಗ್ರಾಮದ ಸರ್ವೆ ನಂ. 37, 38, 32ಗಳ ಜಮೀನನ್ನು ಭೂಸುಧಾರಣಾ ಕಾನೂನಿನ್ವಯ ಸರ್ಕಾರವು ಸ್ವಾಧೀನಪಡಿಸಿಕೊಳ್ಳುವುದು.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಮಾನ್ಯ ಉಪಾಧ್ಯಕ್ಷರೇ, ಹೊಸನಗರ ತಾಲ್ಲೂಕು ಸುಳಗೋಡು ಗ್ರಾಮದ ಉಳುವಿ ಎಂಬಲ್ಲಿಯ ಮೋನನಾಯ್ಕ, ಪುಟ್ಟನಾಯ್ಕ, ರುಕ್ಕನಾಯ್ಕ ಎಂಬುವರು ಭೂಸುಧಾರಣಾ ಕಾನೂನು ಜಾರಿಗೆ ಬಂದ ಸಂದರ್ಭದಲ್ಲಿ ಸರ್ವೆ ನಂ. 32, 37, 38ನೇ ಭೂಮಿಗಳಿಗೆ ಡಿಕ್ಲೆರೇಶನ್ ಕೊಡದೇ ಅವರ ಸ್ವಾಧೀನದಲ್ಲಿರುವುದರಿಂದ ಈ ಭೂಮಿಯನ್ನು ಭೂಸುಧಾರಣಾ ಕಾನೂನಿನನ್ವಯ ಸರಕಾರದಲ್ಲಿ ನಿಹಿತಗೊಳಿಸಬೇಕಾಗುತ್ತದೆ. ಆದರೆ ಈ ಸರ್ಕಾರದಲ್ಲಿ ನಿಹಿತಗೊಳಿಸಬೇಕಾದ ಈ ಭೂಮಿಯನ್ನು ಸುಬ್ರಮಣ್ಯ ಭಟ್ ಎನ್.ಒ. ನಾರಾಯಣ ಭಟ್ ಕದಗೋಡು ಇವರು ಬಾಲಕೃಷ್ಣ ಆಚಾರ್, ರಾಮಕೃಷ್ಣ ಇವರಿಗೆ ಮಾರಾಟ ಮಾಡಿದ್ದು ಇವರಿಂದ ಪುನಃ ಉದಯಕುಮಾರ್ ಮತ್ತು ಎ. ಪ್ರಕಾಶ್‌ರವರು ಈ ಭೂಮಿಯನ್ನು ಖರೀದಿಸಿ ಈ ಭೂಮಿಯಲ್ಲಿ ಇರುವ ಮತ್ತು ಈ ಭೂಮಿಯ ಸಮೀಪವಿರುವ ಸುರಕ್ಷಿತ ಅರಣ್ಯದಿಂದಲೂ ಮರ ಹಾಗೂ ಕಟ್ಟಿಗೆಯನ್ನು ಅಕ್ರಮವಾಗಿ ಕಡಿದು ಅರಣ್ಯ ಇಲಾಖೆಯ ಅಧಿಕಾರಿಗಳೊಡನೆ ಶಾಮೀಲಾಗಿ ಸಿಎನ್‌ಜಿ 8577 ದುರ್ಗಾಕೃಪಾ ಎಂಬ ಲಾರಿಯಲ್ಲಿ ಈ ಮರ ಮತ್ತು ಕಟ್ಟಿಗೆಯನ್ನು ಈ ಭೂಮಿಯಲ್ಲಿ ಕೂಡಿಟ್ಟು ಇಲ್ಲಿಂದ ಸಾಗಿಸಲು ಪರವಾನಿಗೆಗಾಗಿ ಪ್ರಯತ್ನಿಸುತ್ತಿರುವುದು ತಿಳಿದುಬಂದಿದೆ.

ಒಂದು ವೇಳೆ ಸಾಗಾಟಕ್ಕೆ ಪರವಾನಿಗೆ ನೀಡುವುದಾದಲ್ಲಿ ಸರಕಾರಕ್ಕೆ ನಿಹಿತವಾಗುವ ಈ ಭೂಮಿಯು ಯಾರ ಸ್ವಾಧೀನದಲ್ಲಿದೆ, ಯಾವ ಹಕ್ಕಿನಲ್ಲಿ ಮಾರಾಟ ಮಾಡಿದರು, ಮತ್ತು ಹೇಗೆ ಖರೀದಿಸಿದರು ಎಂದು ಇದನ್ನು ಕಾನೂನು ರೀತಿ ಕೂಲಂಕುಷ ತನಿಖೆ ನಡೆಸಿ ತಿಳಿದುಕೊಂಡು ಪರವಾನಿಗೆ ನೀಡುವ ಬಗ್ಗೆ ಕ್ರಮ ಕೈಗೊಂಡು ಸರಕಾರಕ್ಕೆ ಆಗತಕ್ಕ ಲಕ್ಷಾಂತರ ರೂಪಾಯಿ ನಷ್ಟವನ್ನು ತಪ್ಪಿಸಲು ತಾವು ಆದಷ್ಟು ಶೀಘ್ರದಲ್ಲಿ ಈ ಬಗ್ಗೆ ಪ್ರಾಮಾಣಿಕ ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕಾಗಿ ಮಾನ್ಯ ಅರಣ್ಯ ಮಂತ್ರಿಯವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಮಂತ್ರಿಗಳು) :– ಇದರ ಬಗ್ಗೆ ಕೂಡ ಸಂಪೂರ್ಣವಾದ ಮಾಹಿತಿ ಇಲ್ಲ. ಮಾಹಿತಿ ತರಿಸಿ ಅವರಿಗೆ ಉತ್ತರ ಕೊಡುತ್ತೇನೆ.

(7) ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳಿಂದ ಮಾಡಿಸುವ ಕಾಮಗಾರಿಗಳಿಗೆ ಬೇಕಾಗುವ ಸಿಮೆಂಟ್ ಪೂರೈಸುವ ಬಗ್ಗೆ.

ಶ್ರೀ ವಿಜಯಕುಮಾರ್ ಶೆಟ್ಟಿ (ಸೂರತ್ಕಲ್) :– ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಮತ್ತು ರಾಜ್ಯದ ಅನೇಕ ಜಿಲ್ಲಾ ಪರಿಷತ್‌ಗಳು ಹಾಗೂ ವಿವಿಧ ಮಂಡಲ ಪಂಚಾಯ್ತಿಗಳು ತಮ್ಮ ಕಾಮಗಾರಿಗಳಿಗಾಗಿ ಬಳಸುವ ಸಿಮೆಂಟನ್ನು ನಿರ್ದಿಷ್ಟಪಡಿಸಿದ ವಿತರಕರಿಂದಲೇ ಖರೀದಿ ಮಾಡಬೇಕೆಂದು ಸರ್ಕಾರ ಆದೇಶ ನೀಡಿದೆ. ಈ ಆದೇಶದನ್ವಯ ಸಿಮೆಂಟ್ ಖರೀದಿಗಾಗಿ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯ್ತಿ ಹಣವನ್ನು ಮುಂಗಡವಾಗಿ ನಿರ್ದಿಷ್ಟಪಡಿಸಿದ ವಿತರಕರಿಗೆ ಪಾವತಿ ಮಾಡಿದ್ದಾರೆ. ಆದರೆ ಕಳೆದ ಆರು ತಿಂಗಳುಗಳಿಂದ

ಸಿಮೆಂಟ್ ಪೂರೈಕೆಯಾಗಿರುವುದಿಲ್ಲ. ಇದರಿಂದ ಅನೇಕ ಕಾಮಗಾರಿ ಕಾರ್ಯಗಳು ಸ್ಥಗಿತಗೊಂಡಿವೆ; ಬೇರೆಕಡೆಯಿಂದ ಸಿಮೆಂಟ್ ಖರೀದಿ ಮಾಡಲು ಜಿಲ್ಲಾ ಪರಿಷತ್ ಅಥವಾ ಮಂಡಲ ಪಂಚಾಯ್ತಿಗಳಲ್ಲಿ ಹಣ ಇಲ್ಲ. ಆದ್ದರಿಂದ ಸರ್ಕಾರ ಸಿಮೆಂಟ್ ಖರೀದಿಗಿರುವ ನಿರ್ಬಂಧವನ್ನು ತೆಗೆದು ಹಾಕಬೇಕು. ಅಥವಾ ಕಾಮಗಾರಿಗೆ ಬೇಕಾದ ಸಿಮೆಂಟ್ ಪೂರೈಕೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :– ಈ ವಿಷಯಕ್ಕೆ ಸಂಬಂಧಪಟ್ಟಂತೆ, ಗ್ರಾಮೀಣ ಮತ್ತು ಪಂಚಾಯತ್‌ರಾಜ್ ಮಂತ್ರಿಗಳ ವತಿಯಿಂದ ಉತ್ತರವನ್ನು ಒದಗಿಸಲಾಗುವುದು.

(ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯ್ಕನಹಳ್ಳಿ):– ಮಾನ್ಯ ಸದಸ್ಯರು ಹಾಜರಿರಲಿಲ್ಲ)

(8) ಬೈಲಹೊಂಗಲ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿ, ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :– ಮಾನ್ಯ ಉಪಾಧ್ಯಕ್ಷೆಣಿಯವರೇ, ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿ ಈ ವರ್ಷದಲ್ಲಿ ಕಾಲಕ್ಕೆ ಸರಿಯಾಗಿ ಮಳೆಯಾಗಿರುವುದಿಲ್ಲ. ಮತ್ತು ಕೆಲವು ಕಡೆಗೆ ಮಳೆ ಆದದ್ದು ಸಹ ಆದು ಬೆಳೆಗೆ ಅನುಕೂಲವಾಗಿರುವುದಿಲ್ಲ. ಬೆಳೆಗೆ ಯಾವಾಗ ಮಳೆ ಆಗತ್ಯವೋ ಆಗ ಮಳೆಯಾಗದೆ, ನಂತರ ಮಳೆಯಾದರೆ, ಅದು ಬೆಳೆಗೆ ಅನುಕೂಲವಾಗುವುದಿಲ್ಲ. ಇದು ಅಲ್ಲದೆ, ಮಲಪ್ರಭಾ ನದಿಯಿಂದ ಲಿಫ್ಟ್ ಇರಿಗೇಷನ್ ಪಡೆಯುವ ಗ್ರಾಮದ ಜಮೀನುಗಳಿಗೂ ಸಹ ನೀರು ಸರಿಯಾಗಿ ಬಂದಿರುವುದಿಲ್ಲ. ಮತ್ತು ಹತ್ತಿಯ ಬೆಳೆಗೆ ಬಿದ್ದ ರೋಗ ತಡೆಯಲು ಸಹ ಆಗಿರುವುದಿಲ್ಲ. ಈ ವರ್ಷದ ಆವರೇಜ್ ಬೆಳೆಯು ಸಹ ಅತಿ ಕಡಿಮೆ ಇದೆ. ಮತ್ತು ದನಗಳಿಗೆ ಮೇವಿನ ಕೊರತೆಯೂ ಸಹ ಇದೆ. ಮತ್ತು ಜನರಿಗೆ ಉದ್ಯೋಗವಿಲ್ಲದೆ ವಲಸೆ ಹೋಗುತ್ತಿದ್ದಾರೆ. ಹಾಗೂ ಮಳೆಯ ಅಭಾವದಿಂದಾಗಿ ಬೈಲಹೊಂಗಲ ತಾಲ್ಲೂಕಿನ ಮುರಕೆಬಾವಿ, ಸಂಗೊಳ್ಳಿ, ವಕ್ಕುಂದ, ವಣ್ಣೂರ, ನೇಸರ್ಗಿ, ನಯಾನಯಾನಗರ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆಯಂತೂ ಹೇಳಲು ಅಸಾಧ್ಯವಾಗಿದೆ. ಆದ್ದರಿಂದ ಕಂದಾಯ ಅಧಿಕಾರಿಗಳು ಬೈಲಹೊಂಗಲ ತಾಲ್ಲೂಕಿನಲ್ಲಿ ಬರಗಾಲವಿರುವುದಿಲ್ಲವೆಂದು ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿರುತ್ತಾರೆ. ಅವರ ಮಾಹಿತಿಯನ್ನು ನೋಡಿದರೆ, ಅವರು ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿಲ್ಲವೆಂದು ತಿಳಿಯುತ್ತದೆ. ಬೈಲಹೊಂಗಲ ತಾಲ್ಲೂಕಿನಲ್ಲಿ ಮಳೆಯಿಲ್ಲದೆ ತೊಂದರೆಯಾಗಿರುವ ಈ ವಿಷಯವನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಈ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಿ, ಬರಗಾಲ ಕಾಮಗಾರಿಗಳನ್ನು ಪ್ರಾರಂಭಿಸಿ ದನಕರುಗಳಿಗೆ ಮೇವನ್ನು ಒದಗಿಸುವುದು ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಉದ್ಯೋಗಗಳನ್ನು ಪ್ರಾರಂಭಿಸಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :– ಇದರ ಬಗ್ಗೆ ಡೀಟೈಲ್ ಉತ್ತರವನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.